ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Karnatak University, Dharwad.
ಪರೀಕ್ಷಾ ವಿಭಾಗ
Examination Section

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಗೌಪ್ಯ ಶಾಖೆ
Confidential Branch

ಘೋ.ನಂ. (O)0836-2215259
ಫ್ಯಾಕ್ಸ ನಂ. 0836-2741928

ನಂ. ಕವಿವಿ/ಪರೀಕ್ಷಾ(ಗೌಪ್ಯ)/2022/ 71

ದಿನಾಂಕ: 02.08.2022

## ನೆನಪೋಲೆ

**ವಿಷಯ** : 2022-23ನೇ ಸಾಲಿನಲ್ಲಿ ಕವಿವಿ., ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಧ್ಯಾಪಕರ ವಿವರವಾದ ಮಾಹಿತಿಯನ್ನು ಪೂರೈಸುವ ಕುರಿತು.

**ಉಲ್ಲೇಖ**: ಸುತ್ತೋಲೆ ನಂ. ಕವಿವಿ/ಪರೀಕ್ಷಾ(ಗೌಪ್ಯ)/2022/63 ದಿನಾಂಕ: 20.07.2022

------

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸನ್ 2022-23ನೇ ಸಾಲಿನ ಪರೀಕ್ಷಾ ಕಾರ್ಯಗಳನ್ನು ಜರುಗಿಸುವ ಸಂಬಂಧವಾಗಿ ವಿಷಯವಾರು (Subject wise) ಪ್ರಾಧ್ಯಾಪಕರ ಜೇಷ್ಠತಾ ಯಾದಿಯನ್ನು ತಯಾರಿಸಬೇಕಾಗಿದ್ದು, ಅದಕ್ಕಾಗಿ ತಮ್ಮ ಮಹಾವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ 1 ರಿಂದ 6 ನೇ ಸೆಮಿಸ್ಟರ ತರಗತಿಗಳಿಗೆ ಬೋಧಿಸುತ್ತಿರುವ ಖಾಯಂ U.G.C / State Scale ಹಾಗೂ Non-U.G.C.(Full Time / Temporary / Part-time / Guest Faculty) ಪ್ರಾಧ್ಯಾಪಕರ ವಿವರಗಳನ್ನು ಪ್ರತ್ಯೇಕವಾಗಿ ವಿಷಯವಾರು (Subject wise) ಯಾದಿ ತಯಾರಿಸಿ, ದಿನಾಂಕ **05.08.2022**ರೊಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಉಲ್ಲೇಖಿತ ಕಚೇರಿ ಸುತ್ತೋಲೆ ಮುಖಾಂತರ ಸೂಚಿಸಲಾಗಿತ್ತು.

ಮುಂದುವರೆದು, ಕೆಲವು ಮಹಾವಿದ್ಯಾಲಯಗಳಿಂದ ಪ್ರಾಧ್ಯಾಪಕರ ಮಾಹಿತಿ ಇದೂವರೆಗೂ ಸಲ್ಲಿಸಿರುವುದಿಲ್ಲ. ಕಾರಣ ಈ ವಿಷಯ ಅತ್ಯಂತ ತ್ವರಿತ ಎಂದು ಪರಿಗಣಿಸಿ ಪ್ರಾಧ್ಯಾಪಕರ ಮಾಹಿತಿಯನ್ನು ಈ ಮೊದಲು ತಿಳಿಸಿದಂತೆ ಕ.ವಿ.ವಿ.,ಗೆ ಸಲ್ಲಿಸಲು ಸೂಚಿಸಲಾಗಿದೆ. ಈಗಾಗಲೇ ಸಲ್ಲಿಸಿದ ಪ್ರಾಧ್ಯಾಪಕರ ಮಾಹಿತಿಯನ್ನು ಮತ್ತೊಮ್ಮೆ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ ಹಾಗೂ ಅವಧಿ ಮುಗಿದ ನಂತರ ಬಂದಂತಹ ಮಾಹಿತಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

2/8/22

ಕುಲಸಚಿವರು (ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ,

**ಪ್ರತಿ ಸಾದರಪೂರ್ವಕವಾಗಿ:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಶೇಷಾದ್ರಿ ರಸ್ತೆ, ಬೆಂಗಳೂರು.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಿನಿ ವಿಧಾನಸೌಧ, ಡಿ.ಸಿ.ಕಂಪೌಂಡ, ಧಾರವಾಡ.

**ಪ್ರತಿ ಮಾಹಿತಿಗಾಗಿ:**

3. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
4. ಕುಲಪತಿಗಳ / ಕುಲಸಚಿವರ / ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ., ಧಾರವಾಡ ಇವರಿಗೆ ಮುಂದುವರೆದು ಸದರ ನೆನಪೋಲೆಯನ್ನು ಕ.ವಿ.ವಿ., ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.